# ಸುಖವು ಬೀದಿಯ ನೆರಳು

**ಪ್ರೊ.** ಶಿವಪ್ಪ ಖಿನ್ನರಾಗಿದ್ದರು... ಬೋಳು ತಲೆ; ಡೊಣ್ಣ ಮೆಣಸಿನಕಾಯಿಯಂತಹ ಮೂಗು, ಅಜಾನುಬಾಹು ನಿಲುವಿನ ಅವರು ಹಾಸ್ಯ ಪ್ರವೃತ್ತಿಯುಳ್ಳವರಾಗಿದ್ದರು. ಜಗತ್ತಿನ ಸಣ್ಣ ಪುಟ್ಟ ಸಂಗತಿಗಳ ಮೇಲೂ ಜೋಕು ಮಾಡಿ ನಕ್ಕು ನಗಿಸುತ್ತಿದ್ದರು. ಹಾಗೆ ನೋಡಿದರೆ ಪ್ರೊ. ಶಿವಪ್ಪನವರು ಕ್ಲಾಸುಗಳಲ್ಲಿ ಯಾವತ್ತೂ ಗಂಭೀರವಾಗಿ ಪಾಠ ಮಾಡಿದವರಲ್ಲ... 16 ವರ್ಷಗಳ ಕಾಲ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿದ್ದ ಅವರು ಭಾರತೀಯ ಕಾವ್ಯ ಮೀಮಾಂಸೆಯ ಪಾಠ ಮಾಡುವಾಗಲೂ ವಿದ್ಯಾರ್ಥಿಗಳನ್ನು ಜೋಕುಗಳಲ್ಲೇ ತೇಲಿಸಿಬಿಡುತ್ತಿದ್ದರು.

ಆವತ್ತು ಬೆಳಿಗ್ಗೆ ವಾಕಿಂಗ್‌ಗೆ ಹೋದಾಗ ಹಳೆಯ ವಿದ್ಯಾರ್ಥಿಯೊಬ್ಬ ಸಿಕ್ಕಿದ್ದ. ಸಾಮಾನ್ಯವಾಗಿ ಹಳೆಯ ವಿದ್ಯಾರ್ಥಿಗಳನ್ನು ಅಧ್ಯಾಪಕರು ನೆನಪಿಟ್ಟುಕೊಳ್ಳುವುದಿಲ್ಲ. ಓದಿನಲ್ಲಿ ಮುಂದೆ ಇದ್ದ ಅಥವಾ ಕಿಡಿಗೇಡಿಯಾಗಿದ್ದ ವಿದ್ಯಾರ್ಥಿಗಳನ್ನು ಮಾತ್ರ ನೆನಪಿಟ್ಟುಕೊಂಡಿರುತ್ತಾರೆ. ಆದರೆ ಪ್ರೊ. ಶಿವಪ್ಪನವರು ಈ ವಿಷಯದಲ್ಲಿ ಅಸಾಧಾರಣವಾಗಿದ್ದರು. ಅಧ್ಯಾಪಕ ವೃತ್ತಿಯಲ್ಲಿದ್ದಾಗ ತಮ್ಮ ಸಂಪರ್ಕಕ್ಕೆ ಬಂದ ಬಹುಪಾಲು ವಿದ್ಯಾರ್ಥಿಗಳನ್ನು ಹೆಸರು ಹಿಡಿದು ಕರೆಯುವಷ್ಟು ಅವರ ಮೆದುಳು ಚುರುಕಾಗಿ ಕೆಲಸ ಮಾಡುತ್ತಿತ್ತು.

ವಿದ್ಯಾರ್ಥಿನಿಯರ ವಿಷಯದಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ಹೊಂದಿದ್ದರು... ಸೀರೆ ಉಟ್ಟುಕೊಳ್ಳುವ ವಿದ್ಯಾರ್ಥಿನಿಯರನ್ನು ಬಿಚ್ಚೋಲೆ ಗೌರಮ್ಮನ ಗುಂಪಿನವರೆಂದು, ಚೂಡಿದಾರ ಹಾಕುವವರನ್ನು 'ಹೇಮಾಮಾಲಿನಿ' ಗುಂಪಿನವರೆಂದು ವರ್ಗೀಕರಿಸಿ ನೆನಪಿನಲ್ಲಿಟ್ಟುಕೊಂಡಿದ್ದರು. ಅವರ ನೆನಪಿನ ಗಣಿಯಲ್ಲಿ ವಿದ್ಯಾರ್ಥಿನಿಯರಿಗೆ ಸಂಬಂಧಪಟ್ಟ ಮಾಹಿತಿ ಸಂಪೂರ್ಣವಾಗಿರುತ್ತಿತ್ತು... ವಿದ್ಯಾರ್ಥಿನಿಯರನ್ನು ಹೊರತುಪಡಿಸಿದರೆ, ಪ್ರೊ. ಶಿವಪ್ಪನವರು ಹೆಚ್ಚು ಇಷ್ಟಪಡುತ್ತಿದ್ದದ್ದು ತಾವು ಹೇಳಿದ ಕೆಲಸ ಕಾರ್ಯ ಮಾಡುತ್ತಿದ್ದ ವಿಧೇಯ ವಿದ್ಯಾರ್ಥಿಗಳನ್ನು. ಶಿಷ್ಯರಿಗೆ ಗುರುಗಳ ಬಗ್ಗೆ ಅಪಾರ ಭಯಭಕ್ತಿ ಇರಬೇಕೆಂದು ಅಪೇಕ್ಷಿಸುತ್ತಿದ್ದರು. ತಮ್ಮನ್ನು ಇಷ್ಟಪಡದ, ಗೌರವಿಸದ ಹಾಗೂ ತಾವು ಹೇಳಿದ ಕೆಲಸಗಳನ್ನು